**ಸಾಕ್ಷಿಗೆ ದಿನಾಂಕ 05.12.2025 ರಂದು ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ:**

2017 ರಲ್ಲಿ ವಾರ್ಷಿಕ ವಹಿವಾಟು ರೂ. 18 ಲಕ್ಷಗಳು ನಡೆದಿರುತ್ತದೆ ಎಂದು ತೋರಿಸಲು ಆದಾಯ ತೆರಿಗೆ ದಾಖಲೆಗಳನ್ನು ಸಲ್ಲಿಸಿರುತ್ತೇನೆ. ಅದು ನನ್ನ ಪರವಾಗಿ ಸಾಕ್ಷಿಯಾಗಿ ಗುರುತು ಆಗಿರುವುದಿಲ್ಲ. ನಾನೇ ಸುಳ್ಳು ತಯಾರಿಸಿದ ದಾಖಲೆಗಳಾಗಿರುವ ಕಾರಣಕ್ಕೆ ಅವುಗಳನ್ನು ನನ್ನ ಪರವಾಗಿ ಗುರುತು ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. 2017 ರಿಂದ 2018 ವರೆಗಿನ ನನ್ನ ಬ್ಯಾಂಕ್ ಪಾಸ್ ಬುಕ್ ಖಾತೆಯ ಪ್ರತಿಗಳನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ನಾನು ನೀಡಿದ ನೋಟಿಸ್, ದೂರು ಹಾಗೂ ಸಾಕ್ಷ್ಯ ಪ್ರಮಾಣಪತ್ರಕ್ಕೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ.

ನನ್ನ ಮತ್ತು ಆರೋಪಿಯ ನಡುವೆ ಯಾವುದೇ ವ್ಯವಹಾರ ನಡೆದಿರುವುದಿಲ್ಲ, ನಮ್ಮ ತಂದೆ ಹಾಗೂ ಆರೋಪಿಯ ಮದ್ಯೆ ನಡೆದ ವ್ಯವಹಾರಕ್ಕೆ ನೀಡಿದ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೂ ಮತ್ತು ಆರೋಪಿಗೂ ನೇರ ಪರಿಚಯ ಇರುವುದಿಲ್ಲ, ನನ್ನ ತಂದೆಯ ಮೂಲಕ ಪರಿಚಯವಾಗಿರುತ್ತಾರೆಂದರೆ ಸರಿಯಲ್ಲ. ನಮ್ಮ ತಂದೆ ಮತ್ತು ಆರೋಪಿಯ ನಡುವೆ ದಾವಾ ಸಂಖ್ಯೆ 241/2019 ಎಂಬ ದಾವೆಯು ಮಾನ್ಯ ಅಪರ ಹಿರಿಯ ದಿವಾನಿ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುತ್ತದೆ ಎಂದರೆ ಮಾಹಿತಿ ಇರುವುದಿಲ್ಲ.

ದಿ.15.06.2015 ರಲ್ಲಿ ರೂ. 5 ಲಕ್ಷದ ಮೊತ್ತದ ಚೀಟಿಯನ್ನು ಆರೋಪಿಯ ಬಳಿ ತೆರೆದಿರುತ್ತಾರೆಂದರೆ ಮಾಹಿತಿ ಇರುವುದಿಲ್ಲ. ಸದರಿ ಚೀಟಿಯಲ್ಲಿ ನಾರಾಯಣಸ್ವಾಮಿ, ಶಿವುಕುಮಾರ ಹಾಗೂ ಆರೋಪಿ ಹಾಗೂ ಇನ್ನಿತರೆ 40 ಜನ ಚೀಟಿಯ ಸದ್ಯಸರಾಗಿರುತ್ತಾರೆಂದರೆ ಗೊತ್ತಿರುವುದಿಲ್ಲ. ಪ್ರತಿ ತಿಂಗಳು 15 ನೇ ತಾರೀಖಿಗೆ ಸಂಜೆ 5-00 ಗಂಟೆ ಸಮಯಕ್ಕೆ ರೂ.12,500/- ಗಳನ್ನು ಚೀಟಿ ಹಣವಾಗಿ ಕಟ್ಟುವ ಮಾತುಕತೆಯಾಗಿರುತ್ತದೆ ಎಂದರೆ ಗೊತ್ತಿರುವುದಿಲ್ಲ. ಸದರಿ ಚೀಟಿಯ ಭದ್ರತೆಗಾಗಿ ನಿಪಿ-1 ಹಾಗೂ ಆರೋಪಿಯ 1 ಹೊಸ ಚೆಕ್ಕು ಪುಸ್ತಕದ ನನ್ನ ತಂದೆಯ ಬಳಿ ಇತ್ತು ಎಂದರೆ ಸರಿ ಯಲ್ಲ.

ನಿಪಿ-1 ರಲ್ಲಿ ಆರೋಪಿಯ ಹಸ್ತಾಕ್ಷರ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಕೇವಲ ಕನ್ನಡ ಓದಲು, ಬರೆಯಲು ಬರುತ್ತಿದ್ದು ಆಂಗ್ಲ ಭಾಷೆ ಬರುವುದಿಲ್ಲ ಎಂದರೆ ಸರಿಯಲ್ಲ. 2017 ರಲ್ಲಿ ನಾನು ಆರೋಪಿಗೆ ಆಟೋ ಖರೀದಿಸಲು ಸಾಲವನ್ನು ನೀಡಿರುತ್ತೇನೆಂದು ತಿಳಿಸಿದ್ದು ಆದರೆ, ಆರೋಪಿಯು 2014 ರಲ್ಲಿ ಆಟೋವನ್ನು ಖರೀದಿಸಿ ಈಗಲೂ ಸಹ ಅದನ್ನು ಚಾಲನೆ ಮಾಡುತ್ತಿರುತ್ತಾರೆಂದರೆ ಸಾಕ್ಷಿಯು ನನ್ನ ಬಳಿ ಆಟೋ ಖರೀದಿಸಲು ಹಣ ಬೇಕು ಎಂದು ಕೇಳಿರುತ್ತಾರೆಂದು ನುಡಿಯುತ್ತಾರೆ. ನಿಪಿ-1 ರಲ್ಲಿ ಆರೋಪಿಯ ಸಹಿಯನ್ನು ಹೊರತುಪಡಿಸಿ ಎಲ್ಲಾ ವಿಷಯಗಳನ್ನು ನಾನೇ ಬರೆದುಕೊಂಡಿರುತ್ತೇನೆಂದರೆ ಸರಿಯಲ್ಲ. ನನ್ನ ತಂದೆಗೆ ಚೀಟಿಯ ಭದ್ರತೆಗಾಗಿ ನೀಡಿದ

ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಈ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**